ಪಿಡಬ್ಲ್ಯೂಃ 2

ಆರೋಪಿಯ ಮುಂದೆ ಕೆಂಪು ಬಣ್ಣದ ಪರದೆ ಬಟ್ಟೆ ಇರುವ ಸ್ಟಾಂಡನ್ನು ಇಟ್ಟು ಅವರ ಮುಖ ಸಾಕ್ಷಿಗೆ ಕಾಣದಂತೆ ಮಾಡಲಾಗಿದೆ. (ಸಾಕ್ಷಿಯ ವಿಚಾರಣೆಯನ್ನು Incamera proceedings ಮೂಲಕ ನಡೆಸಲಾಯಿತು) ಕಲಂ 118 ಸಾಕ್ಷ್ಯ ಅಧಿನಿಯಮ ಮತ್ತು ಕಲಂ 36, 37 ಪೋಕ್ಸೋ ಕಾಯ್ದೆ ಅಡಿ ಸಾಕ್ಷವನ್ನು ದಾಖಲಿಸಿಕೊಳ್ಳಲಾಯಿತು.

**<u>ಸಾಕ್ಷಿಯನ್ನು ಪುನಃ ದಿಃ 22-11-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>**

**<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಆರ್‌ಕೆಸಿ ವಕೀಲರಿಂದ ಃ-</u>**

ನಾರಾಯಣಸ್ವಾಮಿ ಬಿನ್ ಹನುಮಂತಪ್ಪ ಚಾಸಾ 4 ನನ್ನ ಮಾವ ಎಂದರೆ ಸರಿ. ಅವರ ಮೇಲೆ 5ನೇ ಆರೋಪಿ ಅಶ್ವಿನಿ ಅತ್ಯಾಚಾರದ ಪ್ರಕರಣದ ದಾಖಲಿಸಿದ್ದು, ಅದು ಇನ್ನೂ ಮುಳಬಾಗಿಲು ನ್ಯಾಯಾಲಯದಲ್ಲಿ ಸಿಸಿ.54/2012 ಚಾಲ್ತಿಯಲ್ಲಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮಾವ ಮತ್ತು ನನ್ನ ತಂದೆ ರಾಜಿ ಮಾಡಿಕೊಳ್ಳುವಂತೆ ಒತ್ತಾಯ ಹೇರಿದ್ದರು ಎಂದರೆ ಸರಿ.

ಆಕೆ ರಾಜಿಗೆ ಒಪ್ಪಿಕೊಂಡಿಲ್ಲ ಎಂದರೆ ಸರಿ. ನಮ್ಮ ಮಾವ ನನ್ನ ತಂದೆಗೆ ಚೆನ್ನಾಗಿ ಕುಡಿಸಿ ನನ್ನಿಂದ ಆರೋಪಿಯ ವಿರುದ್ದ ಈ ದೂರನ್ನು ಕೊಡಿಸಿದ್ದರು. ಆ ಕೇಸಿನಲ್ಲಿ ನನ್ನ ಮಾವನನ್ನು ರಕ್ಷಿಸಲು ನಾನು ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿ. 1ನೇ ಆರೋಪಿ ನನ್ನ ಮೇಲೆ ಅತ್ಯಾಚಾರ ಮಾಡಿಲ್ಲ ಮತ್ತು ಉಳಿದ ಆರೋಪಿತರು ಕೆರೆಯ ಬಳಿ ನನಗೆ ವಿಷ ಪ್ರಾಶನ ಮಾಡಿಸಿಲ್ಲ ಎಂದರೆ ಸರಿ. ನನ್ನ ಮಾವ ಮತ್ತು ತಂದೆಯ ಮಾತನ್ನು ಕೇಳಿ ನಾನು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡಿದ್ದಾರೆ ಎಂದರೆ ಸರಿ.

**ಮರುವಿಚಾರಣೆಃ**

ನಾನು ಮೊದಲು ಹೇಳಿದ ಸಾಕ್ಷಿ ಸತ್ಯವಾಗಿದ್ದು, ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರ ಜೊತೆ ರಾಜಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.